(ಇಂದು ದಿನಾಂಕಃ 28–08–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಬಿ ಎಂ ಎಸ್ ವಕೀಲರಿಂದ ಃ-

1) ನನ್ನ ತಂದೆ ವೀರಪ್ಪ ನಾಗತಾಣ ಮೃತ ಪಟ್ಟು 40 ವರ್ಷಗಳು ಆಗಿದೆ ಎಂದರೆ ನಿಜ. ನನ್ನ ತಾಯಿ ಪಾರ್ವತವ್ವ 2005 ರಲ್ಲಿ ಮೃತ ಪಟ್ಟಿದ್ದಾರೆ ಎಂದರೆ ನಿಜ. ನನ್ನ ತಂದೆ ತಾಯಿಗೆ ಒಟ್ಟು 06 ಜನ ಮಕ್ಕಳು ಎಂದರೆ ನಿಜ. ವಾದಿ ಹಾಗೂ 2 ರಿಂದ 5 ನೇ ಪ್ರತಿವಾದಿಗಳು ನನ್ನ ಸಹೋದರ ಸಹೋದರಿಯರು ಎಂದರೆ ನಿಜ. ನನ್ನ ಜನನ ದಿನಾಂಕ 22-07-1960. ನನ್ನ ತಂದೆಗೆ ಇಬ್ಬರೂ ಸಹೋದರರು ಇದ್ದರು. ನನ್ನ ತಂದೆ ಜೀವಂತವಿದ್ದಾಗಲೆ ಅವರೆಲ್ಲರೂ ಆಸ್ತಿ ವಿಭಾಗ ಮಾಡಿಕೊಂಡಿದ್ದರು ಎಂದರೆ ನಿಜ. ಸದರಿ ಪಾಲುವಿಭಾಗದ ಪ್ರಕಾರ ದಾವಾ ಆಸ್ತಿ ಏಪಿಸಿ ಸಂಖ್ಯೆ 183 ನನ್ನ ತಂದೆಯ ಭಾಗಕ್ಕೆ ಬಂದಿತ್ತು ಎಂದರೆ ನಿಜ.

2) ನಿಡಿ-12 ರ ಪ್ರಕಾರ ಸರ್ವೆ ಸಂಖ್ಯೆ 133/3 ಜಮೀನು ನನ್ನ ಹೆಸರಿನಲ್ಲಿ ಇದೆ ಎಂದರೆ ನಿಜ. ನಿಡಿ-13 ರ ಪ್ರಕಾರ ಸರ್ವೆ ಸಂಖ್ಯೆ 133/4 ಜಮೀನು 5 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ನಿಜ. ನಿಡಿ-14 ರ ಪ್ರಕಾರ ಸರ್ವೆ ಸಂಖ್ಯೆ 133/5 ಜಮೀನು 4 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ನಿಜ. ಸರ್ವೆ ಸಂಖ್ಯೆ 133/5 ರ ಜಮೀನು 4 ನೇ ಪ್ರತಿವಾದಿಯ ಹೆಸರಿನ ಜೊತೆಗೆ 2 ನೇ ಪ್ರತಿವಾದಿಯ ಹೆಸರು ಜಂಟಿಯಾಗಿದೆ ಎಂದರೆ ನಿಜ. ಸಾಕ್ಷಿಯು 4 ನೇ ಪ್ರತಿವಾದಿಯು ಮಾನಸಿಕ ಅಸ್ವಸ್ಥನಿರುವ ಕಾರಣ 2 ನೇ ಪ್ರತಿವಾದಿಯು ಆತನನ್ನು ನೋಡಿಕೊಳ್ಳುವ ಕಾರಣ ಇಬ್ಬರ ಹೆಸರು ಜಂಟಿಯಾಗಿದೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯು ಮಾನಸಿಕ ಅಸ್ವಸ್ಥನಿದ್ದಾನೆ ಎಂದು ತೋರಿಸಲು ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸಿಲ್ಲ.

3) 2 ನೇ ಪ್ರತಿವಾದಿಯನ್ನು ಶಿವಯೋಗಪ್ಪ ಡಂಬಾಳ ರವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ನಿಜ. 2 ನೇ ಪ್ರತಿವಾದಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ನಿಜ. 4 ನೇ ಪ್ರತಿವಾದಿ ಶಲವಡಿಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯ ಜೊತೆ ಹುಬ್ಬಳ್ಳಿಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಜೊತೆ ಹುಬ್ಬಳ್ಳಿಯಲ್ಲಿ ವಾಸವಿದ್ದಾರೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. 4 ನೇ ಪ್ರತಿವಾದಿಯು ಮಾನಸಿಕ ಅಸ್ವಸ್ಥನಿರುವ ಕಾರಣ 2 ನೇ ಪ್ರತಿವಾದಿ ಅವರನ್ನು ತನ್ನ ಜೊತೆ ಹುಬ್ಬಳ್ಳಿಯಲ್ಲಿ ಇಟ್ಟುಕೊಂಡು ನೋಡಿಕೊಳ್ಳುತ್ತಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

4) ನಿಡಿ-15 ರ ಪ್ರಕಾರ ಸರ್ವೆ ಸಂಖ್ಯೆ 133/6 ಜಮೀನು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ನಿಜ. ಈಗ ನನಗೆ ತೋರಿಸಿದ ನಿಡಿ-13 ರಲ್ಲಿನ ಎಂ.ಆರ.ಸಂಖ್ಯೆ ಹೆಚ-24/2021-22 ಆದೇಶದ ಪ್ರಕಾರ ಆಸ್ತಿಗಳು ಅವರವರ ಹೆಸರಿಗೆ ದಾಖಲಾಗಿದೆ ಎಂದರೆ ನಿಜ. ನಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ನಮ್ಮ ಸಹೋದರಿಯರಿಗೆ ಬಿಟ್ಟು ಕೊಟ್ಟಿದ್ದೇವೆ ಎಂದರೆ ಸಾಕ್ಷಿಯು ಸದರಿ ಆಸ್ತಿಯು ನನ್ನ ಹೆಸರಿನಲ್ಲಿ ಇದ್ದ ಕಾರಣ ನನ್ನ ತಮ್ಮಂದಿರರಿಗೆ ಮಾತ್ರ ಬಿಟ್ಟು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಮ್ಮಂದಿರವರಿಗೆ ಪಾಲುವಿಭಾಗದ ಪ್ರಕಾರ ಬಿಟ್ಟು ಕೊಟ್ಟಿದ್ದೇನೆ. ಸದರಿ ಆಸ್ತಿಯು ನಮ್ಮ ಒಟ್ಟು ಕುಟುಂಬದ ಆಸ್ತಿಯಾಗಿದ್ದ ಕಾರಣ ನಾವು ಸಹೋದರರು ಮಾತ್ರ ಪಾಲುವಿಭಾಗ ಮಾಡಿಕೊಂಡು ನನ್ನ ತಮ್ಮಂದಿರರಿಗೆ ಬಿಟ್ಟು ಕೊಟ್ಟಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಹಕ್ಕು ಕೊಟ್ಟಿರುವ ಕಾರಣ ವಾದಿಗೂ ಸಹ ಸದರಿ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು 4 ನೇ ಪ್ರತಿವಾದಿಯನ್ನು ನೋಡಿಕೊಳ್ಳುವ ಕಾರಣ 2 ನೇ ಪ್ರತಿವಾದಿಯ ಹೆಸರನ್ನು ಜಂಟಿಯಾಗಿ ಸೇರಿಸಿದ್ದೇವೆ ಎಂದು ಸ್ವತಃವಾಗಿ ನುಡಿಯುತ್ತಾರೆ.

5) ನನ್ನ ಪ್ರತಿವಾದ ಪತ್ರ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. 4 ನೇ ಪ್ರತಿವಾದಿ ಮಾನಸಿಕ ಅಸ್ವಸ್ಥವಿರುವ ಕಾರಣ 2 ನೇ ಪ್ರತಿವಾದಿ ಅವರನ್ನು ನೋಡಿಕೊಳ್ಳುತ್ತಿದ್ದಾರೆ ಎನ್ನುವ ಕಾರಣಕ್ಕೆ 2 ನೇ ಪ್ರತಿವಾದಿಯ ಹೆಸರನ್ನು ಜಂಟಿಯಾಗಿ ಸೇರಿಸಲಾಗಿದೆ ಎನ್ನುವ ವಿಚಾರವನ್ನು ನನ್ನ ಪ್ರತಿವಾದ ಪತ್ರ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ. ಸಾಕ್ಷಿಯು ಪಾಲುವಿಭಾಗದ ಪತ್ರದಲ್ಲಿ ಬರೆಯಿಸಿದ್ದೇನೆ ಎಂದು ಸ್ವತಃವಾಗಿ ನುಡಿಯುತ್ತಾರೆ. ಸದರಿ ಪಾಲುವಿಭಾಗ ಪತ್ರ ಹಾಜರು ಪಡಿಸಿಲ್ಲ. 1 ರಿಂದ 5 ನೇ ಪ್ರತಿವಾದಿಗಳಾದ ನಾವೆಲ್ಲರೂ ಒಬ್ಬರೇ ವಕೀಲರನ್ನು ನೇಮಿಸಿಕೊಂಡಿದ್ದೇವೆ ಎಂದರೆ ನಿಜ. ನಾನು ಸಲ್ಲಿಸಿರುವ ಪ್ರತಿವಾದ ಪತ್ರವನ್ನೆ 2 ರಿಂದ 5 ನೇ ಪ್ರತಿವಾದಿಗಳು ಅಳವಡಿಸಿಕೊಂಡಿದ್ದಾರೆ ಎಂದರೆ ನಿಜ.

6) ವಾದಿಯು ದಾವೆ ಸಲ್ಲಿಸುವ ಪೂರ್ವದಲ್ಲಿ ನಮಗೆ ನೋಟಿಸ ಕಳುಹಿಸಿದ್ದರು ಎಂದರೆ ನನಗೆ ನೆನಪಿಲ್ಲ. ನಿಪಿ-5 ರ ಪ್ರಕಾರ ಸದರಿ ನೋಟಿಸನ್ನು ನಾನು ಸ್ವೀಕರಿಸಿದ್ದೇನೆ ಎಂದರೆ ನಿಜ. ನೋಟಿಸ ಸ್ವೀಕರಿಸಿದ ನಂತರ ಉತ್ತರ ನೀಡಿಲ್ಲ. ಸಾಕ್ಷಿಯು ವಾದಿಯನ್ನು ಕರೆಯಿಸಿ ವಿಚಾರಣೆ ಮಾಡಿ ಬಂಗಾರ ಹಾಗೂ ಹಣ ಕೊಡುತ್ತೇವೆ ಎಂದು ಹೇಳಿದಾಗ ವಾದಿಯು ಅದಕ್ಕೆ ಒಪ್ಪಲಿಲ್ಲ ಎಂದು ನುಡಿಯುತ್ತಾರೆ. ಆಗ ವಾದಿಯು ತನ್ನ ಪಾಲಿಗೆ ಬರಬೇಕಾಗಿರುವ 2 ಎಕ್ರೆ ಹೊಲ

ಕೊಡುವಂತೆ ಕೇಳಿದ್ದರು ಎಂದರೆ ನಿಜ. ಸಾಕ್ಷಿಯು ಅದು ಪೂರ್ವಾಜಿತ ಆಸ್ತಿ ಅಲ್ಲದ ಕಾರಣ ಆಸ್ತಿ ಕೊಡುವುದಿಲ್ಲ ಎಂದು ಹೇಳಿದ್ದೇವು ಎಂದು ನುಡಿಯುತ್ತಾರೆ.

7) ಸದರಿ ಜಮೀನು ಖರೀದಿ ಮಾಡಿದಾಗ ನನಗೆ 4 ವರ್ಷ ವಯಸ್ಸು ಎಂದರೆ ನಿಜ. ಆಗ ನನ್ನ ತಂದೆ ಜೀವಂತ ಇದ್ದರು ಎಂದರೆ ನಿಜ. ನನ್ನ ತಂದೆಗೆ ಒಂದು ಮನೆ ಮಾತ್ರ ಪಿತ್ರಾರ್ಜಿತವಾಗಿ ಬಂದಿತ್ತು. ನನ್ನ ತಂದೆ ಹೊಲ ಮನೆ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಬೇರೆಯವರ ಜಮೀನುಗಳಲ್ಲಿ ಕೂಲಿಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಜೊತೆಗೆ ನನ್ನ ತಂದೆ ಬೀಡಿ ಕಟ್ಟುವ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ನನ್ನ ತಾಯಿಯು ನಮ್ಮ ಸ್ವಂತ ಜಮೀನಿನಲ್ಲಿ ಮಾತ್ರ ಕೆಲಸ ಮಾಡುತ್ತಿದ್ದರು. ನಾವು ಚಿಕ್ಕವರು ಇದ್ದಾಗ ನಮ್ಮ ಮನೆತನಕ್ಕೆ ಹೊಲ ಬೇಕೆಂದು ನನ್ನ ತಂದೆ ತಾಯಿ ಜಮೀನು ಖರೀದಿಸಿದ್ದರು ಎಂದರೆ ನಿಜ. ಆಗ ನನ್ನ ತಂದೆ ತಾಯಿಗೆ ನಾನು ಹಾಗೂ ವಾದಿ ಮಾತ್ರ ಜನಿಸಿದ್ದೇವು ಎಂದರೆ ನಿಜ. ನಾನು ಮನೆಗೆ ಗಂಡು ಮಗನೆಂದು ನನ್ನ ತಂದೆ ತಾಯಿ ಹೊಲ ನನ್ನ ಹೆಸರಿಗೆ ಖರೀದಿಸಿದ್ದರು ಎಂದರೆ ನಿಜ. ಸಾಕ್ಷಿಯು ನನ್ನ ತಾಯಿ ತವರೂ ಮನೆಯಿಂದ ಹಣ ತಂದು ಅಲ್ಪವಯಿ ಎಂದು ನನ್ನ ಹೆಸರಿನಲ್ಲಿ ಖರೀದಿಸಿದ್ದರು ಎಂದು ಸ್ವತಃ ನುಡಿಯುತ್ತಾರೆ. ನನ್ನ ತಾಯಿ ತವರೂ ಮನೆಯಿಂದ ಹಣ ತಂದು ಜಮೀನು ಖರೀದಿಸಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನನ್ನ ತಂದೆ ತಾಯಿಯ ಸ್ವಂತ ದುಡಿಮೆಯ ಹಣ ಹಾಗೂ ಪಿತ್ರಾರ್ಜಿತ ಆಸ್ತಿಗಳ ಆದಾಯದಿಂದ ದಾವಾ ಜಮೀನನ್ನು ಖರೀದಿಸಿದ್ದರು ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಅಂತಿಮ ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ಮಲ್ಲಿಕಾರ್ಜುನ)

**C/c ದಿವಾಣಿ ನ್ಯಾಯಾಧೀಶರು ನವಲಗುಂದ.**